ತಾರೀಖು 12ನೇ ನವಂಬರ್ 1889.

ಇದರಿಂದ ತಿಳಿಯಪಡಿಸುವದೇನಂದರೆ, 1878ನೇ ಇಸವಿ ಫಾರೆಸ್ಟ್ ರೂಲ್ಸ್ 13ನೇ ಸೆಕ್ಷನ್ ಅನುಸಾರಿ ಮೈಸೂರು ಡಿಸ್ಟ್ರಿಕ್ಟಿನಲ್ಲಿ ಇರುವ ಯಿದರಡಿ ನಮೂದಿಸಲ್ಪಟ್ಟ, ಬೆಂಕಿಯಿಂದ ತಡೆದ ಗವರ್ನಮೆಂಟ್ ಫಾರೆಸ್ಟ್ ಪ್ಲಾಂಟೇಷನ್‌ಗಳು ಪಿಕಾರಿ ಮತ್ತು ಇತರ ಬ್ಯೂಟಿಗಳಿಗೆ ಬಂದ್ ಮಾಡಲ್ಪಟ್ಟಿರುತ್ತವೆ. ಯಾವ ಮನುಷ್ಯ ಯಾ ಮನುಷ್ಯರಾಗಲಿ ಸದರಿ ಫಾರೆಸ್ಟ್ ವ ಪ್ಲಾಂಟೇಷನ್‌ಗಳಲ್ಲಿ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ ಲಿಖಿತಮೂಲಕವಾದ ಹುಕುಂ ಪಡಿಯದೆ ಪ್ರವೇಶ ಮಾಡಕೂಡದು.

ನಂಬರ್.	ಫಾರೆಸ್ಟ್ ವ ಪ್ಲಾಂಟೇಷನ್‌ಗಳ ಹೆಸರು.	ತಾಲ್ಲೂಕು.
1	ವೀರನಹೊಸಹಳ್ಳಿ ಫಾರೆಸ್ಟ್	ಹುಣಸೂರು ತಾಲ್ಲೂಕು
2	ನಾಯಿಹಳ್ಳ ಸಂದಲ್ ಪ್ಲಾಂಟೇಷನ್	ಡಿಟೋ
3	ಗುರುಪುರ್ ಡಿಟೋ	ಡಿಟೋ
4	ಸಂಚೆವಳ್ಳಿ ಡಿಟೋ	ಡಿಟೋ
5	ದೊಡ್ಡಹರುವೆ ಎಫ್ರೋಡಕ್ಷನ್ ಬ್ಲಾಕ್	ಡಿಟೋ
6	ಅನೆಚೌಕೂರು ಡಿಟೋ	ಡಿಟೋ
7	ವೀರನಹೊಸಹಳ್ಳಿ ಡಿಟೋ	ಡಿಟೋ
8	ಮೇಟಿಕುಪ್ಪೆ ಫಾರೆಸ್ಟ್	ಹೆಗ್ಗಡದೇವನಕೋಟೆ ತಾಲ್ಲೂಕು
9	ಕಾರ್ಕನಕೋಟೆ ಫಾರೆಸ್ಟ್	ಡಿಟೋ
10	ಬೇಗೂರು ಫಾರೆಸ್ಟ್	ಡಿಟೋ
11	ಐನೂರು ಮಾರಗುಡಿ ಫಾರೆಸ್ಟ್	ಡಿಟೋ
12	ಕಾಕನಕೋಟೆ ಟೀಕ್ ಪ್ಲಾಂಟೇಷನ್	ಡಿಟೋ
13	ಮೊಸ್ತಿಗುಡಿ ಟೀಕ್ ಪ್ಲಾಂಟೇಷನ್	ಡಿಟೋ
14	ಮಂಜೇಗೌಡನಹಳ್ಳಿ ಟೀಕ್‌ಪ್ಲಾಂಟೇಷನ್	ಡಿಟೊ
15	ಹಂಪಾಪುರ್ ರಿಪ್ರೋಡಕ್ಷನ್ ಬ್ಲಾಕ್	ಡಿಟೋ
16	ಬೇರಂಬಾಡಿ ಫಾರೆಸ್ಟ್	ಗುಂಡ್ಲುಪೇಟೆ ತಾಲ್ಲೂಕು
17	ಬಂಡಿಪುರ್ ಫಾರೆಸ್ಟ್	ಡಿಟೋ
18	ಮದ್ದೂರು ಅಳಲೆ ಪ್ಲಾಂಟೇಷನ್	ಡಿಟೋ
19	ಹಂಗಲಾಸಂದಲ್‌ಪ್ಲಾಂಟೇಷನ್	ಡಿಟೋ
20	ಹಿಡಿಯಾಲ್ ಸಂದಲ್‌ಪ್ಲಾಂಟೇಷನ್	ನಂಜನಗೂಡು ತಾಲ್ಲೂಕು
21	ಚಾಮರಾಜನಗರ ಫಾರೆಸ್ಟ್	ಚಾಮರಾಜನಗರ ತಾಲ್ಲೂಕು

ಸ್ ೧೮೮೯ನೇ ಇಸವಿ ನವಂಬರು ತಾರೀಖು 8.

ಇದರಿಂದ ತಿಳಿಯಪಡಿಸುವದೇನಂದರೆ, 1878ನೇ ಇಸವಿ ಫಾರೆಸ್ಟ್ ರೂಲ್ಸ್ 13ನೇ ಸೆಕ್ಷನ್ ಅನುಸರಿಸಿ ಹಾಸನ ಡಿಸ್ಟ್ರಿಕ್ಟಿನಲ್ಲಿ ಇದರಡಿ ನಮೂದಿಸಲ್ಪಟ್ಟ ಮತ್ತು ಬೆಂಕಿಯಿಂದ ತಡಿಯಲ್ಪಟ್ಟಿರುವ ಫಾರೆಸ್ಟ್ಸುಗಳು ಮತ್ತು ಪ್ಲಾಂಟೇಷನ್‌ಗಳು ಪಿಕಾರಿ ಮತ್ತು ಇತರ ಬ್ಯೂಟಿಗಳಿಗೆ ಬಂದ್ ಮಾಡಲ್ಪಟ್ಟಿರುತ್ತವೆ, ಯಾವ ಮನುಷ್ಯ ಯಾ ಮನುಷ್ಯರಾಗಲಿ ಸದರಿ ಫಾರೆಸ್ಟ್ ವ ಪ್ಲಾಂಟೇಷನ್‌ಗಳಲ್ಲಿ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ ಲಿಖಿತಮೂಲಕವಾದ ಹುಕುಂ ಪಡೆಯದೆ ಪ್ರವೇಶ ಮಾಡಕೂಡದು.

(1) ಹಿರಿಕಲ್‌ಗುಡ್ಡ ಫಾರೆಸ್ಟ್ ಮತ್ತು ಪ್ಲಾಂಟೇಷನ್ .. ಆರಸೀಕೆರೆ ತಾಲ್ಲೂಕು
(2) ಗಂಜಿಕಟ್ಟೆ ಕಾವಲ್ ಪ್ಲಾಂಟೇಷನ್ ... ಹಾಸನ ತಾಲ್ಲೂಕು
(3) ಭಕ್ತರವಳ್ಳಿ ಪ್ಲಾಂಟೇಷನ್ .. ಡಿಟೋ
(4) ವಿಜಯಾವಾರ ಕಾವಲ್ ಫಾರೆಸ್ಟ್ ಮತ್ತು ಪ್ಲಾಂಟೇಷನ್ .. ಅರಕಲಗೂಡು ತಾಲ್ಲೂಕು.

ನೋಟಿಫಿಕೇಷನ್.

ತಾರೀಖು 16ನೇ ನವಂಬರ್ 1889.

ಸ್ ೧೮೭೮ನೇ ಇಸವಿ ಮೈಸೂರ ಫಾರೆಸ್ಟ್ ರೂಲ್ಸಿನ 2ನೇ ಅಧ್ಯಾಯ 12ನೇ ಸೆಕ್ಷನ್ ಅನುಸಾರಿ, ಡಿಮಾರ್ಕೇಷನ್ ಮಾಡಿದ ಕುಕ್ಕ್ವಾಡ, ಉಬ್ರಾಣಿ, ಮನ್ನಾ ಜಂಗಲ್‌ವಳಗೆ ಈ ಕೆಳಗೆ ನಮೂದಿಸಿರುವ ರಸ್ತೆಗಳ ವಾಯಿ ಹಾಲೇ ಉಪಯೋಗದಲ್ಲಿರುವ ಇತರ ಯಲ್ಲಾ ರಸ್ತೆಗಳೂ ಛಂಡೀದಾರಿಗಳೂ ಮತ್ತು ಕಾಲುಹಾದಿಗಳೂ ಸಹ ಸಕಲ ಜನರಿಗೂ ಇದರಿಂದ ಬಂದ್ ಮಾಡಲ್ಪಟ್ಟಿರುತ್ತದೆ.

1. ಜೋಳದ ಹಾಳಿನಿಂದ ಕುಕ್ಕ್ವಾಡಮ್ಮನ ಗುಡಿ ಮಾರ್ಗವಾಗಿ ಮಳಲಭಾವಿ ವರೆಗೆ.
2. ಬೆಂಕಿಪುರದಿಂದ ಗಂಗೂರ ಮಾರ್ಗವಾಗಿ ಮಳಲಭಾವಿಗೆ.
3. ಗಂಗೂರಿಂದ ನುಲೆಬ್ಬಲಿ ಮಾರ್ಗವಾಗಿ ಬಾನವಾಡಿಗೆ.
4. ಗಂಗೂರಿಂದ ದೊಡ್ಡೇರಿ ಮಾರ್ಗವಾಗಿ ಹಾದಿಗೆರೆಗೆ.

5. ಮಾವಿನಹೊಳೇ ಯಿಂದ ಬಿದರೆಮಳೇನಹಳ್ಳಿ ವಾಗ್ರ್‌ವಾಗಿ ಕುಕ್ಕುವಾಡಮ್ಮನ ಗುಡಿಗೆ.

6. ಉಬ್ಬಾಣಿಯಿಂದ ಮಳಲಭಾವಿಗೆ.

ಸ್ರ್ 1890ನೇ ಇಸವಿ ಜನವರೀ ಗುರ್‌ವಾರಾಯತು ಯಿಲ್ಲಿ ನಮೂದಾವ ರಸ್ತೆಗಳ ಹೊರಾಯಿ ಇತರ ರಸ್ತೆಮೇಲೆ ಯಾ ಕಾಲದಾರೀ ಮೇಲೆ ಯಾರಾದರೂ ಜೋದ ವಕ್ಷಕ್ಕೆ ಮನ್ನಾ ಜಂಗಲ್ ವಳಗೆ ಅತಿಕ್ರಮ ಪ್ರವೇಶವೆಂದು ಎಣಿಸಲ್ಪಟ್ಟು ನ್ಯಾಯವಾಗಿ ಶಿಕ್ಷೆಗೆ ಗುರಿಮಾಡಲ್ಪಡುವರು.

ಖಬ್ಬಿಣ ಕರಗಿಸುವವರು ಖಬ್ಬಿಣದ ಕಲ್ಲು ತರುವದಕ್ಕೂ ಸ್ಕರವೂ ಮನ್ನಾ ಜಂಗಲ್ ವಳಗೆ ಯಿರುವ ಇತರ ವೃತ್ತಿಯನ್ನು ತೆಗದುಕೊಳ್ಳುವದಕ್ಕೆ ಸ್ವತಂತ್ರವನ್ನು ಪಡದಂಥಾ ಜನರು ಫಾರೆಸ್ಟು ಆಫಿಸರಿಂದ ಪಾಸ್ ಪಡಿಯತಕ್ಕದ್ದು, ಮತ್ತು ಕೇಳಿದಾಗ ಸದರೀ ಪಾಸ್ ಸನ್ನು ಹಾಜರ್ ಪಡಿಸುವದಕ್ಕೆ ಬದ್ಧವಾಗಿರಬೇಕು.

ಎಸ್. ರಿಕ್ಕೆಟ್ಸ್,
ಫಾರೆಸ್ಟ್ ಇನ್‌ಸ್ಪೆಕ್ಟರ್ ಜನರಲ್.

ಬೆಂಗಳೂರು ಡಿಸ್ಟ್ರಿಕ್ಟ್.

ಬೆಂಗಳೂರು ಸಬ್ ಜಡ್ಜಿಯವರ ಕೋರ್ಟಿನಲ್ಲಿ.

. 1889ನೇ ಇಸವಿ ಅರ್ಜೀ ನಂಬರ್ 856.

ಕೋಲಾರ ತಾಲ್ಲೂಕು ಕಾಮದೇನಹಳ್ಳಿಲ್ಲಿದ್ದು ಮೃತಪಟ್ಟ ಗೊಳಿಗನವೂಡನ ಆಸ್ತೀ ವಿಷಯದಲ್ಲಿ—

ಅರ್ಜೀದಾರ ಕಾರೇಗವೂಡನು, ಮೃತಪಟ್ಟ ಸದರೀ ಗೊಳಿಗವೂಡನಿಗೆ ಮಗ ಆಗಬೇಕೆಂಬ ಹಕ್ಕುದಾರೀ ಮೇಲೆ ಕಾಮದೇನಹಳ್ಳೀ ಸ್ಥಳದ ಕಾರೇಗವೂಡನು ಸದರೀ ಕಾಮದೇನಹಳ್ಳೀ ವಾಸಸ್ಥನಾಗಿ ಮೃತಪಟ್ಟ ಗೊಳಿಗವೂಡನ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟ್ ಮೇರೆಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾನೆ.

ಸದರೀ ದರಖಾಸ್ತುದಾರನಾಥ ಕಾರೇಗವೂಡನ ಅರ್ಜಿಯನ್ನು 1889ನೇ ಇಸವಿ ಡಿಸಂಬರ್ ತಿಂಗಳು ತಾರೀಖು 6ರಲ್ಲು ಕೇಳಿ ಸರಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಮೃತಪಟ್ಟ ಸದರೀ ಗೊಳಿಗವೂಡನ ಆಸ್ತಿಗೆ ಹಕ್ಕುದಾರರಾದ ವಿಪ್ಪರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂಯ ಇದರಿಂದ ತಿಳಿಯಪಡಿಸಿ ಇದೆ.

1889ನೇ ಇಸವಿ ನವಂಬರ್ ತಿಂಗಳು 14ನೇ ತಾರೀಖಿನಲ್ಲಿ ಕೋರ್ಟು ಮೊಹರ್ ಮತ್ತು ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

1889ನೇ ಇಸವಿ ಅರ್ಜೀ ನಂಬರ್ 898.

ಕ್ಲೋಸ್‌ಪೇಟೇ ಕಸಬಾದಲ್ಲಿಯಿದ್ದು ಮೃತಪಟ್ಟ ನಬೀಖಾನಸಾಬರ ಆಸ್ತೀವಿಷಯದಲ್ಲಿ—

ಅರ್ಜೀದಾರ 1ನೇ ಮುಸ್ತಫಾಖಾ, 2ನೇ ಗೌಸ್‌ಖಾ 3ನೇ ಮುರ್ತುಜಾಖಾ ಇವರು ಮೈನರ್, ಯಿವರ ಗಾರ್ಡಿಯ್ ಅಜಮತ್‌ಖಾ, ಮೃತಪಟ್ಟ ಸದರೀ ನಬೀಖಾನಸಾಖ್ರಿಗೆ ಮೈನರ್‌ಗಳು ಮಕ್ಕಳು ಆಗಬೇಕೆಂಬ ಹಕ್ಕುದಾರೀ ಮೇಲೆ ಕ್ಲೋಸ್‌ಪೇಟೇ ಸ್ಥಳದ ಅಜಮತ್‌ಖಾ ಕ್ಲೋಸ್‌ಪೇಟೇ ಕಸಬಾ ವಾಸಸ್ಥನಾಗಿ ಮೃತಪಟ್ಟ ನಬೀಖಾನಸಾಬೀ ಜಿಂದಗಿ ಬಗ್ಯಾಗಿ ಬರತಕ್ಕ ಸಾಲಗಳನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟ್ ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾನೆ.

ಸದರೀ ದರಖಾಸ್ತುದಾರನಾದ ಅಜಮತ್‌ಖಾನಸಾಬರ ಅರ್ಜಿಯನ್ನು 1889ನೇ ಇಸವಿ ಡಿಸಂಬರ್ ತಿಂಗಳು ತಾರೀಖು 13ರಲ್ಲು ಕೇಳಿ ಸರಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ನಬೀಖಾನಸಾಖರ ಆಸ್ತಿಗೆ ಹಕ್ಕುದಾರರಾದ ವಿಪ್ಪರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1889ನೇ ಇಸವಿ ನವಂಬರ್ ತಿಂಗಳು 20ನೇ ತಾರೀಖಿನಲ್ಲಿ ಕೋರ್ಟು ಮೊಹರ್ ಮತ್ತು ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

1889ನೇ ಇಸವಿ ಅರ್ಜೀ ನಂಬರ್ 926.

ಚನ್ನಪಟ್ಟಣ ಕಸಬುದಲ್ಲಿಯಿದ್ದು ಮೃತಪಟ್ಟ ಪುಟ್ಟಕಿಟ್ಟಯ ಆಸ್ತೀ ವಿಷಯದಲ್ಲಿ—

ಅರ್ಜೀದಾರ ಮೂಕಂ ಚಿಕ್ಕ ವೆಂಕಟಯ್ಯನ ಮಗ ಕಿಚ್ಚಯ್ಯನು, ಮೃತಪಟ್ಟ ಸದರೀ ಪುಟ್ಟಕಿಟ್ಟಗೆ ತಂದೆ ಆಗಬೇಕೆಂಬ ಹಕ್ಕುದಾರಿ ಮೇಲೆ ಚನ್ನಪಟ್ಟಣ ಸ್ಥಳದ ಕಿಚ್ಚಯ್ಯನು ಚನ್ನಪಟ್ಟಣ ವಾಸಸ್ಥರಾಗಿ ಮೃತಪಟ್ಟ ಪುಟ್ಟಕಿಟ್ಟಯ ಜಿಂದಗಿ ಬಗ್ಯಾಗಿ ಬರತಕ್ಕ ಸಾಲಗಳನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟ್ ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾನೆ.

ಸದರೀ ದರಖಾಸ್ತುದಾರನಾದ ಕಿಚ್ಚಯ್ಯನ ಅರ್ಜಿಯನ್ನು 1889ನೇ ಇಸವಿ ಡಿಸಂಬರ್ ತಿಂಗಳು ತಾರೀಖು 20ರಲ್ಲು ಕೇಳಿ ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಪುಟ್ಟಕಿಟ್ಟಯ ಆಸ್ತಿಗೆ ಹಕ್ಕುದಾರಾರದ ವಿಪ್ಪರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1889ನೇ ಇಸವಿ ನವಂಬರ್ ತಿಂಗಳು 18ನೇ ತಾರೀಖಿನಲ್ಲಿ ಕೋರ್ಟು ಮೊಹರ್ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.